ಆರ್ಥಿಕ ನೆರವು ನೀಡುವುದು.

4. ನಂತರ ಸೆಕ್ಷನ್ 29ರ ಪ್ರಕಾರ ಘಟಕದ ಆಸ್ತಿಯನ್ನು ವಶಕ್ಕೆ ತೆಗೆದುಕೊಂಡು ಸಾಲಗಾರರು ಸಾಲ ಮರುಪಾವತಿ ಮಾಡಿ ಪುನಃ ಆಸ್ತಿಯನ್ನು ಹಿಂದಕ್ಕೆ ಪಡೆಯಲು ಅವಕಾಶಗಳನ್ನು ನೀಡುವುದು. ಇದರ ನಂತರವೂ ಸಾಲಗಾರರು ಮುಂದೆ ಬರದೆ ಇದ್ದಲ್ಲಿ ಸಂಸ್ಥೆಯು ಸಾಲ ನೀಡಿರುವ ಆಸ್ತಿಗಳನ್ನು ಮಾರಾಟ ಮಾಡಲು ಕ್ರಮ ಜರುಗಿಸುತ್ತದೆ.

5. ಘಟಕದ ಆಸ್ತಿಯನ್ನು ಹರಾಜಿನ ಮೂಲಕ ಮಾರಾಟ ಮಾಡಿದಾಗ ಸುಸ್ತಿಯಾದ ಮೊತ್ತವು ಪೂರ್ಣವಾಗಿ ವಸೂಲಾಗದಿದ್ದಲ್ಲಿ ಘಟಕದ ಪ್ರವರ್ತಕರ/ಜಾಮೀನುದಾರರ ವೈಯಕ್ತಿಕ ಖಾತರಿ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡುವುದಲ್ಲದೆ 1979ರ ಕರ್ನಾಟಕ ಸಾರ್ವಜನಿಕ ಹಣಕಾಸು(ಬಾಕಿ ವಸೂಲಾತಿ) ಕಾಯ್ದೆ ಪ್ರಕಾರ ಜಿಲ್ಲಾಧಿಕಾರಿಗಳಿಗೆ ವಹಿಸಿಕೊಡಲಾಗುವುದು.

6. ಘಟಕದ ಕಾರ್ಯ ಸಾಧ್ಯತೆಯು ಅನುಮಾನಾಸ್ಪದವೆಂದು ಕಂಡು ಬಂದಾಗ ಸಂಸ್ಥೆಯು ಏಕಗಂಟಿನ ಸಾಲ ಚುಕ್ತಾ ಸೌಲಭ್ಯವನ್ನು ಒದಗಿಸುವುದು. ಈ ಸೌಲಭ್ಯವನ್ನು ಪಡೆದುಕೊಂಡು ಪ್ರವರ್ತಕರು ತಮ್ಮ ಸಾಲಗಳನ್ನು ತೀರಿಸಿಕೊಳ್ಳಬಹುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 918(928)

ಸದಸ್ಯರ ಹೆಸರು: ಶ್ರೀ ಭಕ್ತವತ್ಸಲಂ ಎಂ.(ಕೆ.ಜಿ.ಎಫ್)

ಪ್ರಶ್ನೆ

ಅ) ಅಧ್ಯಕ್ಷರು ಹಾಗೂ ಆಯುಕ್ತರು ನಗರಸಭೆ ರಾಬರ್ಟ್‌ಸನ್‌ಪೇಟೆ, ಇವರ ವಿರುದ್ಧ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ಇವರು ನೀಡಿರುವ ವರದಿಯ ಮೇಲೆ ಕೈಗೊಂಡ ಕ್ರಮವೇನು?

ಆ) ಲೋಕಾಯುಕ್ತರವರ ದೂರಿನ ಮೇರೆಗೆ ಅಧ್ಯಕ್ಷರು ಮತ್ತು ಆಯುಕ್ತರು, ನಗರಸಭೆ ರಾಬರ್ಟ್‌ಸನ್‌ಪೇಟೆ ಇವರುಗಳ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿರುವುದು ಸತ್ಯವಾಗಿದೆಯೆ?

ಉತ್ತರಿಸುವ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಉತ್ತರ

ಅ) ಈ ಬಗ್ಗೆ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ಇವರಿಂದ ವರದಿಯನ್ನು ಸರ್ಕಾರದಲ್ಲಿ ಸ್ವೀಕರಿಸಲಾಗಿದ್ದು, ಸದರಿ ಪ್ರಕರಣವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಲೋಕಾಯುಕ್ತದ ತನಿಖಾ ವರದಿಯ ಆಧಾರದ ಮೇರೆಗೆ ಪ್ರಕರಣದಲ್ಲಿ ಭಾಗಿಯಾಗಿರುವ ಹಿಂದಿನ ಅಧಿಕಾರಿ: ನೌಕರರ ಮೇಲೆ ವಿಚಾರಣೆ ನಡೆಸಲು ಸರ್ಕಾರದ ಆದೇಶ ದಿನಾಂಕ: 22-1-2002 ರಲ್ಲಿ ಲೋಕಾಯುಕ್ತರಿಗೆ ವಹಿಸಲಾಗಿದೆ.

ನಿಯೋಜಿತ ಬಸವನಬಾಗೇವಾಡಿ ಬಸ್ ಡಿಪೋ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 919(240)

ಸದಸ್ಯರ ಹೆಸರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಪ್ರಶ್ನೆ

ಅ) ನಿಯೋಜಿತ ಬಸವನಬಾಗೇವಾಡಿ ಬಸ್ ಡಿಪೋ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಈ ಯೋಜನೆಗೆ ಬಿಡುಗಡೆಯಾದ ಹಣ ಎಷ್ಟು ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಇ) ಬಿಜಾಪುರದಿಂದ ಬೆಂಗಳೂರಿಗೆ ಬರುವ ಅಲ್ಟ್ರಾ ಡೀಲೆಕ್ಸ್ ಬಸ್ಸು ದುರಸ್ತಿಯಲ್ಲಿದ್ದು ಪ್ರಯಾಣಕರಿಗೆ ಅನಾನುಕೂಲವಾಗುತ್ತಿರುವುದರಿಂದ ಹೊಸ ಬಸ್ ಬಿಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹ್ಮದ್(ಸಾರಿಗೆ ಸಚಿವರು)

ಉತ್ತರ

ಅ) ವಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ಪಟ್ಟಣದಲ್ಲಿ ನೂತನ ಬಸ್ ಡಿಪೋ ಸ್ಥಾಪಿಸುವ ಕುರಿತಂತೆ, ಈಗಾಗಲೇ ಖಾಸಗಿ ಒಡೆತನದಲ್ಲಿರುವ 6 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಕುರಿತಂತೆ, ಭೂ ಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಈ ಸಂಬಂಧವಾಗಿ ರೂಪಾಯಿ 2,40,000-00 ಹಣವನ್ನು ಸಹ ಜಿಲ್ಲಾಧಿಕಾರಿಗಳ ಕಛೇರಿಗೆ ಜಮಾ ಮಾಡಲಾಗಿದೆ. ಭೂಪರಿವರ್ತನೆಯಾಗಿ ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆದುಕೊಂಡ ಕೂಡಲೇ ಘಟಕ ನಿರ್ಮಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು.